info@buntsanghablr.com
buntsanghabangalore@yahoo.in



# ಸ್ನೇಹ ಚಿಂತನೆ

ಮಾಸ ಪತ್ರಿಕೆ



ಸೆಪ್ಟೆಂಬರ್ 2026
ಸಂಪುಟ 22 ಸಂಚಿಕೆ 09

ಸಂಚಿಕೆ ಬೆಲೆ ರೂ. 1/-



ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು 2024-26


ಪ್ರಾರ್ಥನಾ ಮಂದಿರ ಸಮಿತಿ-ಗಣೇಶ ಚತುರ್ಥಿ ಆಚರಣೆ


ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-I ಮತ್ತು II- ಸ್ವಾತಂತ್ರ್ಯ ದಿನಾಚರಣೆ

ಒಗ್ಗಟ್ಟಿನ ಹೆಜ್ಜೆಯಲ್ಲಿ, ಸಮಾಜದ ಭವಿಷ್ಯದತ್ತ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com




# ಅಭಿನಂದನೆಗಳು

DR.DEEPAK SHETTY



PRESIDENT

MADHUKAR SHETTY.M



VICE PRESIDENT

SOUMYAPRIYA HEGDE



VICE PRESIDENT

AMARNATH SHETTY



HONORARY SECRETARY

SUREKHA SHETTY



JOINT SECRETARY

RAMITH B SHETTY



TREASURER

ಪ್ರತಿಷ್ಠಿತ ಬಂಟರ ಸಂಘ ಬೆಂಗಳೂರು ಇದರ
**ನೂತನ ಪದಾಧಿಕಾರಿಗಳಾಗಿ** ಹಾಗೂ
**ಕಾರ್ಯಕಾರಿ ಸಮಿತಿಯ ಸದಸ್ಯರಾಗಿ** ಆಯ್ಕೆಯಾದ
**ಸರ್ವರಿಗೂ ಹಾರ್ದಿಕ ಅಭಿನಂದನೆಗಳು**



## ಎಂ.ಬಿ ಉಮೇಶ್ ಶೆಟ್ಟಿ ಮಂದಾರ್ತಿ

ಸಂಸ್ಥಾಪಕರು,
ಅಭಯ ಸೇವಾ ಫೌಂಡೇಶನ್ ಬೆಂಗಳೂರು

ಹಾಗೂ

ಅಧ್ಯಕ್ಷರು, ಪದಾಧಿಕಾರಿಗಳು, ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ
ಎಲ್ಲ ಜಿಲ್ಲಾ ಘಟಕ ಅಧ್ಯಕ್ಷರು ಹಾಗೂ ಅಭಯ ಸೇವಾ ಫೌಂಡೇಶನ್ ಸದಸ್ಯರು.

ADVT.

# ಸ್ನೇಹ ಚಿಂತನೆ

VOL - 22
SEPTEMBER - 2026
ISSUE - 09

Monthly Magazine Published by
BUNTS' SANGHA BANGALORE

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ನಿಕಟಪೂರ್ವ ಅಧ್ಯಕ್ಷರ ಮಾತು | 3 |
| ನೂತನ ಅಧ್ಯಕ್ಷರ ಮಾತು | 4 |
| ನಿಕಟಪೂರ್ವ ಗೌರವ ಕಾರ್ಯದರ್ಶಿಯವರ ವರದಿ | 5 |
| ನೂತನ ಗೌರವ ಕಾರ್ಯದರ್ಶಿಯವರ ಮಾತು | 6 |
| 2026–29 ನೇ ಸಾಲಿಗೆ ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು | 7 |
| BSRNS Vidyaniketan - II Independence Day Celebration | 9 |
| Bunts' Sangha R.N.S Composite PU College Independence Day 2026 - 27 : Report | 10 |
| ಬಂಟರ ಸಂಘ ಬೆಂಗಳೂರು – ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯಕ್ಷಗಾನ ಕಾರ್ಯಕ್ರಮ | 11 |
| ಬಂಟರ ಸಂಘ ಬೆಂಗಳೂರು ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಎಲ್.ಎನ್. ಹೆಗ್ಡೆಯವರಿಗೆ ನುಡಿನಮನ | 12 |
| ಬಂಟರ ಸಂಘ ಬೆಂಗಳೂರು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ ಗಣೇಶ ಚತುರ್ಥಿ ಆಚರಣೆ | 13 |

**ಮುಖ ಪುಟ**

ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು 2024–26

ಪ್ರಾರ್ಥನಾ ಮಂದಿರ ಸಮಿತಿ–ಗಣೇಶ ಚತುರ್ಥಿ ಆಚರಣೆ

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–I ಮತ್ತು II– ಸ್ವಾತಂತ್ರ್ಯ ದಿನಾಚರಣೆ

ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



**ಒಗ್ಗಟ್ಟಿನ ಹೆಜ್ಜೆಯಲ್ಲಿ, ಸಮಾಜದ ಭವಿಷ್ಯದತ್ತ**

**ಪ್ರಿಯ ಓದುಗ ಬಂಧುಗಳೇ,**

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಗೆದ್ದು ಜವಾಬ್ದಾರಿ ವಹಿಸಿಕೊಂಡಿರುವ ಎಲ್ಲಾ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು.

ಚುನಾವಣೆ ಮುಗಿದಿದೆ. ಇನ್ನು ಮುಂದೆ ಗೆಲುವು – ಸೋಲಿನ ಚರ್ಚೆಗಿಂತ ಸಮಾಜದ ಅಭಿವೃದ್ಧಿಯೇ ನಮ್ಮೆಲ್ಲರ ಮುಖ್ಯ ಗುರಿಯಾಗಬೇಕು. ಹೊಸ ಆಡಳಿತವು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಒಗ್ಗಟ್ಟಿನಿಂದ ಸಮಾಜವನ್ನು ಮುನ್ನಡೆಸಲಿ ಎಂಬುದು ಆಶಯ.

ವಿದ್ಯಾರ್ಥಿಗಳ ಶಿಕ್ಷಣ, ಯುವಕರ ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ, ಮಹಿಳೆಯರ ಸಬಲೀಕರಣ, ಉದ್ಯಮಿಗಳಿಗೆ ಪ್ರೋತ್ಸಾಹ ಹಾಗೂ ಅಗತ್ಯವಿರುವವರಿಗೆ ನೆರವು–ಇವುಗಳಿಗೆ ಆದ್ಯತೆ ನೀಡುವಂತಹ ಕಾರ್ಯಯೋಜನೆಗಳು ರೂಪುಗೊಳ್ಳಲಿ.

ಇದರ ಜೊತೆಗೆ ಬೆಂಗಳೂರಿನಲ್ಲಿ ನಮ್ಮ ಸಮಾಜದ ಸಂಘಟನೆಯನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ನಗರದ ನಾಲ್ಕು ದಿಕ್ಕುಗಳಲ್ಲಿ ಸೂಕ್ತ ಸ್ಥಳಗಳನ್ನು ಖರೀದಿಸಿ, ಸ್ಥಳೀಯ ಕಚೇರಿಗಳನ್ನು ಸ್ಥಾಪಿಸುವ ಕುರಿತು ಚಿಂತನೆ ನಡೆಯಬೇಕು. ಇದರಿಂದ ಆಯಾ ಪ್ರದೇಶಗಳಲ್ಲಿ ವಾಸಿಸುವ ಬಂಟ ಸಮಾಜದ ಬಂಧುಗಳಿಗೆ ಸಂಘದ ಸಂಪರ್ಕ ಮತ್ತು ಸೇವೆಗಳು ಇನ್ನಷ್ಟು ಸುಲಭವಾಗಿ ತಲುಪಬಹುದು. ವಿಜಯನಗರದ ಬಂಟರ ಶಾಖೆಯ ಮಾದರಿಯಲ್ಲಿ ಇಂತಹ ಸ್ಥಳೀಯ ಕೇಂದ್ರಗಳು ಬೆಳೆದರೆ, ಸಮಾಜದೊಂದಿಗೆ ನಿರಂತರ ಸಂಪರ್ಕ ಹಾಗೂ ವಿವಿಧ ಸಮಾಜಮುಖಿ ಚುಟುವಟಿಕೆಗಳಿಗೆ ಉತ್ತಮ ವೇದಿಕೆಯಾಗಬಹುದು.

ಅದರ ಜೊತೆಗೆ, ನಮ್ಮ ಸಮಾಜದ ಬಹುದಿನಗಳ ಪ್ರಮುಖ ಆಶಯವಾದ ಸರ್ಕಾರದ ಮಟ್ಟದಲ್ಲಿ ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಒಂದು ನಿಗಮ ಮಂಡಳಿ ಅಥವಾ ಸೂಕ್ತವಾದ ಪ್ರಾಧಿಕಾರ ಸ್ಥಾಪನೆಯಾಗಬೇಕು ಎಂಬ ಬೇಡಿಕೆಯನ್ನು ಗಂಭೀರವಾಗಿ ಮುಂದಕ್ಕೆ ಕೊಂಡೊಯ್ಯುವ ಅಗತ್ಯವಿದೆ. ಇದಕ್ಕಾಗಿ ಸಮಾಜದ ಎಲ್ಲಾ ಮುಖಂಡರು, ಸಂಘಟನೆಗಳು ಹಾಗೂ ಯುವಶಕ್ತಿಯನ್ನು ಒಗ್ಗೂಡಿಸಿ, ಸರ್ಕಾರದೊಂದಿಗೆ ನಿರಂತರವಾಗಿ ಸಂವಾದ ನಡೆಸುವ ಪ್ರಯತ್ನ ನಡೆಯಲಿ.

ಹುದ್ದೆಗಳು ಬದಲಾಗುತ್ತವೆ, ನಾಯಕತ್ವ ಬದಲಾಗುತ್ತದೆ; ಆದರೆ ಸಮಾಜದ ಆಶಯಗಳು ಮತ್ತು ಮುಂದಿನ ಪೀಳಿಗೆಯ ಭವಿಷ್ಯ ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿ.

ಒಗ್ಗಟ್ಟು ನಮ್ಮ ಶಕ್ತಿ.
ಸೇವೆ ನಮ್ಮ ಸಂಕಲ್ಪ.
ಸಮಾಜದ ಪ್ರಗತಿಯೇ ನಮ್ಮ ಗುರಿ.

ಹೊಸ ನಾಯಕತ್ವಕ್ಕೆ ಮತ್ತೊಮ್ಮೆ ಶುಭಾಶಯಗಳು. ಅವರ ಅವಧಿಯಲ್ಲಿ ಸಮಾಜವು ಇನ್ನಷ್ಟು ಸಂಘಟಿತವಾಗಿ, ಶಕ್ತಿಯುತವಾಗಿ ಮತ್ತು ಪ್ರಗತಿಯತ್ತ ಸಾಗಲಿ ಎಂಬ ಹಾರೈಕೆ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ನಿಕಟಪೂರ್ವ ಅಧ್ಯಕ್ಷರ ಮಾತು



**ಗೌರವಾನ್ವಿತ ಸದಸ್ಯರೇ ಮತ್ತು ಬಂಧುಗಳೇ,**

2024–26 ರ ಎರಡು ವರ್ಷಗಳ ಅಧ್ಯಕ್ಷೀಯ ಅವಧಿಯಲ್ಲಿ, ಸಂಘದ ಪ್ರಧಾನ ಸೇವಕನಾಗಿ ಸೇವೆ ಮಾಡಲು ತಾವು ನೀಡಿದ ಸಹಕಾರ ಮತ್ತು ಬೆಂಬಲದಿಂದ ಹಲವು ಮಹತ್ವದ ಕಾರ್ಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಹೆಮ್ಮೆಪಡುತ್ತೇನೆ.

- ಆರ್.ಎನ್.ಎಸ್. ವಿದ್ಯಾನಿಕೇತನ – II ಶಾಲೆಯ ನೂತನ ವಿದ್ಯಾರ್ಥಿನಿ ನಿಲಯ, ಊಟದ ಹಾಲ್ ಕಟ್ಟಡ ಪೂರ್ಣಗೊಂಡಿದೆ. ನೆರೆಯ ಗಡಿ ವಿವಾದವನ್ನು ಇತ್ಯರ್ಥಗೊಳಿಸಿ, ಕಾಂಪೌಂಡ್ ಗೋಡೆಯನ್ನು ಪೂರ್ಣಗೊಳಿಸಲಾಗಿದೆ. 2025 ರಲ್ಲಿ ಶಾಲೆಗೆ ಅಧಿಕೃತವಾಗಿ ಸಿಬಿಎಸ್ಇ ಪರವಾನಗಿ ದೊರೆತಿದೆ.
- ಶಾಲೆಯಲ್ಲಿ 'ಮೊಬೈಲ್ ಆ್ಯಪ್' ನ್ನು ಪರಿಚಯಿಸಲಾಗಿದ್ದು, ಪೋಷಕರು ಹಾಗೂ ಆಡಳಿತ ಮಂಡಳಿಯವರು ಶಾಲಾ ಶುಲ್ಕ, ವಿದ್ಯಾರ್ಥಿ ಮತ್ತು ಶಿಕ್ಷಕರ ವಿವರಗಳು ಸೇರಿದಂತೆ ಶಾಲೆಯ ಪ್ರಮುಖ ಮಾಹಿತಿಯನ್ನು ಆನ್‌ಲೈನ್ ಮೂಲಕ ಕ್ಷಣಮಾತ್ರದಲ್ಲಿ ವೀಕ್ಷಿಸಬಹುದಾಗಿದೆ.
- ಎರಡೂ ಶಾಲೆಯನ್ನು ಆಧುನಿಕ ಯುಗಕ್ಕೆ ತಕ್ಕಂತೆ ಸಜ್ಜುಗೊಳಿಸಲು ತರಗತಿಗಳಿಗೆ ಸ್ಮಾರ್ಟ್ ಬೋರ್ಡ್‌ಗಳು, ಸಿಸಿ ಕ್ಯಾಮೆರಾ ವ್ಯವಸ್ಥೆ, ಪುಟ್ಟ ಮಕ್ಕಳಿಗೆ ಸುಸಜ್ಜಿತ ಆಟದ ಮೈದಾನ, CET / KCET / JEE full-time fledged integrated course, CA Integrated Course, 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ CET Foundation Course ನ್ನು ಪ್ರಾರಂಭಿಸಲಾಗಿದೆ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮುದ್ರಣಾಲಯದ ಜೊತೆ "Knowledge Partner" ಆಗಿ ನಮ್ಮ ಶಾಲೆಯು ಕಾರ್ಯ ನಿರ್ವಹಿಸುತ್ತಿದೆ. ಹೆಚ್ಚುವರಿಯಾಗಿ, ಇಂದಿನ ಅಗತ್ಯಕ್ಕೆ ತಕ್ಕಂತೆ AI ಮತ್ತು Robotic ಶಿಕ್ಷಣಕ್ಕೆ ಚಾಲನೆ ನೀಡಲಾಗಿದೆ ಹಾಗೂ ನೂತನ 80 ಕಂಪ್ಯೂಟರ್‌ಗಳನ್ನು ಅಳವಡಿಸಿ ಪ್ರಸ್ತುತ ವಿದ್ಯಮಾನಕ್ಕೆ ಕಂಪ್ಯೂಟರ್ ಲ್ಯಾಬ್‌ನ್ನು ನವೀಕರಿಸಲಾಗಿದೆ.
- ಸಂಕಲ್ಪ (ಉಚಿತ ಪಿಯುಸಿ ಶಿಕ್ಷಣ) ಯೋಜನೆಯಡಿ ಪ್ರಸ್ತುತ ಸುಮಾರು 240ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 'ವಿದ್ಯಾ ಸಂಕಲ್ಪ ನಿಧಿ'ಗೆ ಪುನ: ಚಾಲನೆ ನೀಡಿದ್ದು, 100ಕ್ಕೂ ಹೆಚ್ಚು ದಾನಿಗಳ ಯೋಜನೆಯನ್ನು ಹೊಂದಿದ್ದು, 20ಕ್ಕೂ ಹೆಚ್ಚು ಸದಸ್ಯರು ದೇಣಿಗೆ ನೀಡುವ ಭರವಸೆ ನೀಡಿದ್ದು, ಒಂದೇ ತಿಂಗಳಲ್ಲಿ 9 ಸದಸ್ಯರಿಂದ ರೂ. 45 ಲಕ್ಷ ದೇಣಿಗೆ ಸಂಗ್ರಹವಾಗಿದೆ.
- ಸಂಘ ಮತ್ತು ಶಾಲೆಯ ಲೆಕ್ಕಪತ್ರಗಳನ್ನು ಡಿಜಿಟಲೀಕರಣಗೊಳಿಸಿ Talley Cloud ಮೂಲಕ ಆನ್‌ಲೈನ್‌ನಲ್ಲಿ ತಕ್ಷಣವೇ ಲಭ್ಯವಾಗುವಂತೆ ವ್ಯವಸ್ಥೆಗೊಳಿಸಲಾಗಿದೆ. ಕೆಲವು ವರ್ಷದಿಂದ ಉಳಿದಿರುವ PF ಮೊತ್ತವನ್ನು ಪಾವತಿಸಿ ಇತ್ಯರ್ಥಗೊಳಿಸಿದ್ದು, ಆಧಾರ್ ಸೀಡಿಂಗ್ ಹಾಗೂ PAN ಜೋಡಣೆ ಕಾರ್ಯವು ಪೂರ್ಣಗೊಂಡಿದೆ. ಶಾಲಾ ಬಸ್ ಶುಲ್ಕವನ್ನು ಸಂಘದ ಮೂಲಕ ನೇರವಾಗಿ ಸಂಗ್ರಹಿಸುವ ಕ್ರಮದಿಂದ ಸುಮಾರು 30 ಲಕ್ಷದಷ್ಟು ಉಳಿತಾಯ ಮಾಡಲಾಗಿದೆ ಹಾಗೂ ಶಾಲಾ ಪುಸ್ತಕದ ಶುಲ್ಕ, ಚುನಾವಣಾ ಖರ್ಚು, ಆ್ಯಪ್ ಶುಲ್ಕ, ಸ್ನೇಹಚಿಂತನೆ ಪ್ರಿಂಟಿಂಗ್ ಖರ್ಚು ಹಾಗೂ ಇತರೆ ಖರ್ಚುಗಳಲ್ಲಿಯೂ ಕಡಿಮೆ ಮಾಡಲಾಗಿದೆ. ಸಂಘದ ಇತಿಹಾಸದಲ್ಲೇ ಮೊದಲ ಬಾರಿಗೆ ನಿವ್ವಳ ಲಾಭವು (Net Profit) 10 ಕೋಟಿಗೂ ಮೀರಿದೆ. ಸಂಘದ ಫಿಕ್ಸ್ಡ್ ಡೆಪಾಸಿಟ್ ಮೊತ್ತವನ್ನು 87 ಕೋಟಿಗೆ ಹೆಚ್ಚಿಸಲಾಗಿದೆ. 80ಜಿ ನೋಂದಣಿಯನ್ನು 5 ವರ್ಷಗಳ ಅವಧಿಗೆ ನವೀಕರಿಸಲಾಗಿದೆ. ಕಳೆದ 10 ವರ್ಷಗಳ TDS ಸಂಬಂಧಿತ PAN ತಿದ್ದುಪಡಿಗಳು ಹಾಗೂ ಬಾಕಿಯಿರುವ ಬಡ್ಡಿ ಮೊತ್ತವನ್ನು ಸಂಪೂರ್ಣವಾಗಿ ಇತ್ಯರ್ಥಪಡಿಸಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ನೋಂದಣಿಯನ್ನು 2023 ರಿಂದ 2037 ರವರೆಗೆ 14 ವರ್ಷಗಳ ಅವಧಿಗೆ ನವೀಕರಿಸಲಾಗಿದೆ.
- ತಂತ್ರಜ್ಞಾನ ಆಧಾರಿತ ಸುಲಭ ಸೇವೆಗಳನ್ನು ಸದಸ್ಯರಿಗೆ ಒದಗಿಸುವ ಉದ್ದೇಶದಿಂದ, ಸದಸ್ಯತ್ವದ (Membership) ವಿವರಗಳನ್ನು KYC ಮಾಡಲು ಅನುಕೂಲವಾಗುವಂತೆ 'ಮೊಬೈಲ್ ಆ್ಯಪ್'ನ್ನು ಡಿಜಿಟಲ್ ರೂಪದಲ್ಲಿ ಸಿದ್ಧಪಡಿಸಲಾಗಿದೆ. ಇದರ ಮೂಲಕ ಮಾಸಿಕ ಸ್ನೇಹಚಿಂತನೆ ಸೇರಿದಂತೆ ಸಂಘದ ವಿವಿಧ ಕಾರ್ಯಚಟುವಟಿಕೆಗಳನ್ನು ಸುಲಭವಾಗಿ ವೀಕ್ಷಿಸಬಹುದು.
- ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಈಜು, ಯೋಗ, ಜಿಮ್ನಾಸ್ಟಿಕ್ಸ್, ಬಿಲ್ಲುಗಾರಿಕೆ ಸ್ಪರ್ಧೆಗಳಲ್ಲಿ ಹಲವು ಪ್ರಶಸ್ತಿಗಳನ್ನು ಗೆದ್ದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಶೈಕ್ಷಣಿಕವಾಗಿಯೂ ರಾಜ್ಯಕ್ಕೆ ರ್‍ಯಾಂಕ್‌ನ್ನು ಪಡೆದಿದೆ.

ಸಂಘದ ಗೌರವ ಕಾರ್ಯದರ್ಶಿಯವರಾದ ವಿಜಯಣ್ಣ, ಖಜಾಂಚಿಯವರಾದ ಅಶೋಕಣ್ಣ, ಎಲ್ಲಾ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಪ್ರತಿಯೊಬ್ಬ ಸದಸ್ಯರಿಗೂ ಹೃತ್ಪೂರ್ವಕ ಧನ್ಯವಾದಗಳು.

ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ದೀಪಕ್ ಶೆಟ್ಟಿ ಮತ್ತು ಅವರ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಅವರ ನಾಯಕತ್ವದಲ್ಲಿ ಸಂಘವು ಇನ್ನಷ್ಟು ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಹಾರೈಸುತ್ತೇನೆ.

**ಆತ್ಮೀಯ ವಂದನೆಗಳೊಂದಿಗೆ,**

**ಸಿಎ. ಅಶೋಕ್ ಶೆಟ್ಟಿ ಎಂ.**

**ಅಧ್ಯಕ್ಷರು 2024–26**

# ನೂತನ ಅಧ್ಯಕ್ಷರ ಮಾತು



**ಪ್ರಿಯ ಸದಸ್ಯ ಬಾಂಧವರೇ,**

ಶ್ರೀ ವರಸಿದ್ಧಿ ವಿನಾಯಕನು ಎಲ್ಲರಿಗೂ ಸುಖ, ಶಾಂತಿ, ಸಮೃದ್ಧಿ ಹಾಗೂ ಸನ್ಮಂಗಳವನ್ನು ಕರುಣಿಸಲಿ.

ಮುಂದಿನ ಮೂರು ವರ್ಷಗಳು ಕೇವಲ ಅಧಿಕಾರಾವಧಿಯಾಗದೆ, ಹೊಸ ಅಧ್ಯಾಯಕ್ಕೆ ನಾಂದಿಯಾಗಲಿ.

ಬಂಟರ ಸಂಘ ಬೆಂಗಳೂರು ಎಂಬ ಹೆಮ್ಮೆಯ ಹಾಗೂ ಪ್ರತಿಷ್ಠಿತ ಸಂಸ್ಥೆಯ ಅಧ್ಯಕ್ಷರಾಗಿ 2026–29 ರ ಅವಧಿಗೆ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ನನಗೆ ಹೆಮ್ಮೆ, ಗೌರವ ಮತ್ತು ದೊಡ್ಡ ಜವಾಬ್ದಾರಿ.

ನೀವು ನಮ್ಮ ಮೇಲೆ ಇರಿಸಿದ ಪ್ರೀತಿ, ವಿಶ್ವಾಸ ಮತ್ತು ಭರವಸೆಗೆ ಹೃದಯಪೂರ್ವಕ ಧನ್ಯವಾದಗಳು.

ಹಿರಿಯರು ಕಟ್ಟಿದ ಭವ್ಯ ಪರಂಪರೆಯನ್ನು ಉಳಿಸಿ, ಬಲಪಡಿಸಿ, ಮುಂದಿನ ಪೀಳಿಗೆಗೆ ಮತ್ತಷ್ಟು ಸಮರ್ಥವಾಗಿ ಹಸ್ತಾಂತರಿಸುವುದು ನಮ್ಮ ಸಂಕಲ್ಪ. ಈ ಜವಾಬ್ದಾರಿಯ 'ಭಾರ' ಮತ್ತು ವ್ಯಾಪ್ತಿಯ ಸ್ಪಷ್ಟ ಅರಿವು ನಮಗಿದೆ. ಇದನ್ನು ಸಮರ್ಥವಾಗಿ ನಿರ್ವಹಿಸಲು ಹಿರಿಯರ ಮಾರ್ಗದರ್ಶನ, ಸದಸ್ಯ ಬಂಧುಗಳ ಸಂದರ್ಭೋಚಿತ ಸಲಹೆ ಮತ್ತು ಕಿರಿಯ ಮಿತ್ರರ ಸಹಕಾರವನ್ನು ನಾವು ಸದಾ ಬಯಸುತ್ತೇವೆ.

ಚುನಾವಣಾ ಪೂರ್ವದಲ್ಲಿ ನಿಮ್ಮೊಂದಿಗೆ ಹಂಚಿಕೊಂಡ ನಮ್ಮ ದೂರದೃಷ್ಟಿ ಯೋಜನೆಗಳ ಅನುಷ್ಠಾನಕ್ಕೆ ನಾವು ಬದ್ಧರಿದ್ದೇವೆ. ಶಿಕ್ಷಣ ಸಂಸ್ಥೆಗಳ ಸಮಗ್ರ ಅಭಿವೃದ್ಧಿ ಹಾಗೂ ಯುವಶಕ್ತಿಗೆ ಉದ್ಯೋಗ – ಉದ್ಯಮದ ಹೊಸ ಅವಕಾಶಗಳನ್ನು ಕಲ್ಪಿಸುತ್ತೇವೆ. ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿ, ಸುಭದ್ರ ನೆಲೆಗಟ್ಟಿನ ಮೇಲೆ ಸುಂದರ ಭವಿಷ್ಯ ನಿರ್ಮಿಸುತ್ತೇವೆ. ಸಂಘ – ಸಮುದಾಯದ ನಿರಂತರ ಸಂಪರ್ಕದೊಂದಿಗೆ ಪ್ರತಿಯೊಬ್ಬ ಸದಸ್ಯನಿಗೂ ಸ್ಪಂದಿಸುತ್ತೇವೆ.

ತುಳು ಭಾಷೆಗೆ ಕರ್ನಾಟಕದ 2ನೇ ಹೆಚ್ಚುವರಿ ಅಧಿಕೃತ (ಆಡಳಿತಾತ್ಮಕ) ಭಾಷೆಯ ಮಾನ್ಯತೆ ದೊರೆತಿರುವುದು ಹೆಮ್ಮೆಯ ವಿಷಯ. ಈ ಮಹತ್ವದ ಸಾಧನೆಗೆ ಶ್ರಮಿಸಿದ ಸಮಸ್ತ ತುಳುವರು, ತುಳು ಸಂಘಟನೆಗಳು, ರಾಜಕೀಯ ನಾಯಕರು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಹಾಗೂ ಕರ್ನಾಟಕ ಸರಕಾರಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ತುಳು ಭಾಷೆಯ ಅಭಿವೃದ್ಧಿ ಹಾಗೂ ಉಳಿವಿಗಾಗಿ ಶ್ರಮಿಸಿದ ಎಲ್ಲರಿಗೂ ಹಾರ್ದಿಕ ಶುಭಾಶಯಗಳು.

2024–26 ರ ಅವಧಿಯಲ್ಲಿ ಸಂಘದ ಪ್ರಗತಿಗೆ ಶ್ರಮಿಸಿ, ಯಶಸ್ವಿಯಾಗಿ ಮುನ್ನಡೆಸಿದ ಅಧ್ಯಕ್ಷರಾದ ಸಿಎ ಅಶೋಕ್ ಶೆಟ್ಟಿ ಎಂ. ಹಾಗೂ ಅವರ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು.

ಬೆಂಗಳೂರು ಬಂಟರ ಸಂಘವನ್ನು ಒಂದು ಮಾದರಿ ಸಮುದಾಯ ಸಂಸ್ಥೆಯಾಗಿ ರೂಪಿಸುವ ನಮ್ಮ ಸಂಕಲ್ಪಕ್ಕೆ ತಾವೆಲ್ಲರೂ ಬಲ ತುಂಬುವಿರಿ ಎಂಬ ದೃಢ ವಿಶ್ವಾಸ ನಮ್ಮದು. ಸಂಘದ ಕುರಿತಾದ ಯಾವುದೇ ವಿಚಾರಗಳಿದ್ದರೂ ಸಂಘದ ಕಚೇರಿಯ ಮೂಲಕ ಸಂಘದ ಪದಾಧಿಕಾರಿಗಳನ್ನು ನೇರ ಸಂಪರ್ಕಿಸಬಹುದು.

ದಯಮಾಡಿ ಜೊತೆಗಿದ್ದು ನಮ್ಮ ಹಾದಿಯನ್ನು ಹಗುರಗೊಳಿಸಿ.

ಪ್ರೀತಿ ಹಾಗೂ ಕೃತಜ್ಞತೆಗಳೊಂದಿಗೆ,

**ಡಾ. ದೀಪಕ್ ಶೆಟ್ಟಿ**
**ಅಧ್ಯಕ್ಷರು 2026–29**

# ನಿಕಟಪೂರ್ವ ಗೌರವ ಕಾರ್ಯದರ್ಶಿಯವರ ವರದಿ



**ಸತ್ಯಮೇವ ಜಯತೆ**

**ಮನುಷ್ಯನು ತನ್ನ ಮಾತು, ಚಿಂತನೆ ಮತ್ತು ಕೃತ್ಯಗಳಲ್ಲಿ ಸತ್ಯವನ್ನು ಪಾಲಿಸಿದಾಗ, ಅವರ ಜೀವನದಲ್ಲಿ ವಿಶ್ವಾಸ ಮತ್ತು ನೈತಿಕ ಶಕ್ತಿ ಬೆಳೆಯುತ್ತದೆ. ಅಸತ್ಯವು ಕೆಲವೊಮ್ಮೆ ತಾತ್ಕಾಲಿಕವಾಗಿ ಯಶಸ್ಸನ್ನು ತಂದುಕೊಟ್ಟಂತೆ ಕಾಣಬಹುದು. ಆದರೆ ಸತ್ಯವು ದೀರ್ಘಕಾಲ ಉಳಿಯುವ ಮೌಲ್ಯವನ್ನು ಪ್ರತಿನಿಧಿಸುತ್ತದೆ.**

**ಮಾನ್ಯ ಸದಸ್ಯರೇ,**

ನಮ್ಮ ಸಂಘದ 2024–26ನೇ ಸಾಲಿನ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಸಮಸ್ತ ಬಂಟ ಬಾಂಧವರಿಗೆ ನನ್ನ ಪ್ರೀತಿಯ ನಮನಗಳು.

ಈ ಎರಡು ವರ್ಷಗಳ ಸೇವಾ ಅವಧಿಯಲ್ಲಿ ಸಂಘ ಮತ್ತು ಶಾಲೆಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಸಂಜೆ ಕಾಲೇಜಿನ ದಾಖಲಾತಿಗಳು ಗಣನೀಯ ಸಂಖ್ಯೆಗಳಲ್ಲಿ ಏರಿಕೆಯಾಗುತ್ತಿದೆ. ಶಿಕ್ಷಕರಿಗೆ ಅಗತ್ಯವಿರುವ ತರಬೇತಿಗಳನ್ನು ನೀಡಲಾಗಿದೆ. ಸಂಘದ ಸದಸ್ಯರುಗಳಿಗೆ ವೈದ್ಯಕೀಯ ನೆರವು, ಶೈಕ್ಷಣಿಕ ನೆರವು, ಹೆಣ್ಣು ಮಕ್ಕಳ ಮದುವೆಗೆ ಕರಿಮಣಿ, ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ ಹಾಗೂ ಇತರ ಸಹಾಯಗಳನ್ನು ಮಾಡಲಾಗಿದೆ. ಸಂಘದ ನೀತಿ ನಿಯಮಾವಳಿಗನುಗುಣವಾಗಿ ನಮ್ಮ ಹಿರಿಯರು ಕಟ್ಟಿ ಬೆಳೆಸಿದಂತಹ ಸಂಘದ ಘನತೆ ಗೌರವಕ್ಕೆ ಧಕ್ಕೆಯಾಗದ ಹಾಗೆ ಕಾರ್ಯ ನಿರ್ವಹಿಸಿದ ತೃಪ್ತಿ ನನಗಿದೆ.

ದಿನಾಂಕ 19.09.2026ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಸಲಹೆ, ಸೂಚನೆಗಳನ್ನು ನೀಡಿದ ಸದಸ್ಯ ಬಾಂಧವರಿಗೆಲ್ಲ ವಂದನೆಗಳು.

ದಿನಾಂಕ 20.09.2026ರಂದು ಚುನಾವಣೆಯನ್ನು ನಮ್ಮ ಸಮಿತಿಯು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸಿದೆ. ಈ ಚುನಾವಣೆಯಲ್ಲಿ ಹೊಸ ಪ್ರಯೋಗವಾಗಿ ಮತದಾರರ ಗುರುತಿನ ಚೀಟಿಯನ್ನು ಸ್ಕ್ಯಾನ್ ಮಾಡಿ, ಫೋಟೊ ತೆಗೆದು, ಪರಿಶೀಲಿಸಿದ ನಂತರವೇ ಮತದಾನಕ್ಕೆ ಅರ್ಹತೆ ನೀಡಲಾಗಿದೆ. ಎಲ್ಲಾ ಸ್ಥಳಗಳಲ್ಲಿ ಕ್ಯಾಮರಾಗಳನ್ನು ಅಳವಡಿಸಿದ್ದು, ಚುನಾವಣೆಯ ಚಿತ್ರೀಕರಣವನ್ನೂ ಮಾಡಲಾಗಿದೆ. ಚುನಾವಣೆಯನ್ನು ಅತ್ಯಂತ ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ನಡೆಸಲು ನಮ್ಮೊಂದಿಗೆ ಸಹಕರಿಸಿದ ಚುನಾವಣಾ ಸಮಿತಿ ಸದಸ್ಯರುಗಳಿಗೆ, ಪದಾಧಿಕಾರಿಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ, ರಿಟರ್ನಿಂಗ್ ಅಧಿಕಾರಿ ಶ್ರೀ ಹರೀಶ್ ಕುಮಾರ್ ಬಿ.ಎಸ್.ರವರಿಗೆ, ತಾಂತ್ರಿಕ ವ್ಯವಸ್ಥೆಗಳನ್ನು ಒದಗಿಸಿದ ಶ್ರೀ ಜೈ ದೀಪ್ ಮತ್ತು ತಂಡದವರಿಗೆ ವಂದನೆಗಳು.

2026–29ನೇ ಸಾಲಿನ ನೂತನ ಅಧ್ಯಕ್ಷರಾಗಿ ಡಾ. ದೀಪಕ್ ಶೆಟ್ಟಿ, ಉಪಾಧ್ಯಕ್ಷರುಗಳಾಗಿ ಶ್ರೀ ಮಧುಕರ ಎಂ. ಶೆಟ್ಟಿ ಹಾಗೂ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಗೌರವ ಕಾರ್ಯದರ್ಶಿಯವರಾಗಿ ಶ್ರೀ ಅಮರನಾಥ ಶೆಟ್ಟಿ, ಜೊತೆ ಕಾರ್ಯದರ್ಶಿಯವರಾಗಿ ಶ್ರೀಮತಿ ಸುರೇಖಾ ಶೆಟ್ಟಿ, ಖಜಾಂಚಿಯವರಾಗಿ ಶ್ರೀ ರಮಿತ್ ಬಿ. ಶೆಟ್ಟಿಯವರು ಆಯ್ಕೆಯಾಗಿರುತ್ತಾರೆ. ಇವರೆಲ್ಲರಿಗೂ ಅಭಿನಂದನೆಗಳು ಹಾಗೂ ಆಯ್ಕೆಯಾದ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II ರಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿಜಯನಗರ ಶಾಲಾ ಸಂಕೀರ್ಣದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಪ್ಯಾರಾ ರೆಜಿಮೆಂಟ್‌ನ ಲೆಫ್ಟಿನೆಂಟ್ ಕರ್ನಲ್ ಸುನೀಲ್ ಪಂಡಿತ್‌ರವರು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು. ಯಲಚಗುಪ್ಪೆ ಶಾಲಾ ಸಂಕೀರ್ಣದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಸುಭೇದಾರ್ ಮೇಜರ್ ಹರ್ಪಾಲ್ ಸಿಂಗ್‌ರವರು ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು.

ದಿನಾಂಕ 14.09.2026ರಂದು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಗಣೇಶ ಚೌತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖರವರಿಗೆ ಮತ್ತು ಅವರ ತಂಡಕ್ಕೆ ಅಭಿನಂದನೆಗಳು ಹಾಗೂ ಸಹಕರಿಸಿದ ಎಲ್ಲಾ ದಾನಿಗಳಿಗೂ ಧನ್ಯವಾದಗಳು. ಇದೇ ದಿನ ಮಧ್ಯಾಹ್ನ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ಗಣೇಶ ಚತುರ್ಥಿಯಂದು "ಗದಾಯುದ್ಧ" ಯಕ್ಷಗಾನವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ದಿನಾಂಕ 05.09.2026ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಶಿಕ್ಷಕರ ದಿನಾಚರಣೆಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಎಲ್ಲಾ ಶಿಕ್ಷಕರಿಗೂ ಗೌರವವನ್ನು ಸಲ್ಲಿಸಲಾಯಿತು.

ಇಂತಿ ತಮ್ಮ ಪ್ರೀತಿಯ,
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ 2024–26

# ನೂತನ ಗೌರವ ಕಾರ್ಯದರ್ಶಿಯವರ ಮಾತು



**ಆತ್ಮೀಯ ಸಮಾಜ ಬಾಂಧವರಿಗೆಲ್ಲರಿಗೂ ನವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು.**

ಬೆಂಗಳೂರು ಬಂಟರ ಸಂಘದ 2026–29ನೇ ಸಾಲಿನ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತವಾಗಿ, ಸೌಹಾರ್ದಯುತವಾಗಿ ಹಾಗೂ ಸುಲಲಿತವಾಗಿ ನಡೆಸಿಕೊಟ್ಟ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೂ ಧನ್ಯವಾದಗಳು. ಈ ಚುನಾವಣೆಯಲ್ಲಿ ನಮ್ಮನ್ನು ಬೆಂಬಲಿಸಿ, ಅಭೂತಪೂರ್ವವಾಗಿ ಚುನಾಯಿಸಿ ಆಶೀರ್ವದಿಸಿದ ತಮಗೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ನೀವು ನಮಗೆ ನೀಡಿರುವ ಈ ಗೆಲುವು ಕೇವಲ ಒಂದು ಚುನಾವಣೆಯ ಫಲಿತಾಂಶವಲ್ಲ. ಇದು ನಮ್ಮ ಮೇಲಿಟ್ಟಿರುವ ನಿಮ್ಮ ವಿಶ್ವಾಸ, ನಿರೀಕ್ಷೆ ಮತ್ತು ಜವಾಬ್ದಾರಿಯ ಪ್ರತೀಕವಾಗಿದೆ. ಈ ವಿಶ್ವಾಸವನ್ನು ಅತ್ಯಂತ ಗೌರವದಿಂದ ಸ್ವೀಕರಿಸುತ್ತೇವೆ. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುವುದು ನಮ್ಮೆಲ್ಲರ ಮೊದಲ ಕರ್ತವ್ಯವಾಗಿದೆ.

ನಮ್ಮ ಸಂಘವನ್ನು ಇಂದಿನ ಹಂತಕ್ಕೆ ತಂದು ನಿಲ್ಲಿಸಲು ತಮ್ಮ ಜೀವನದ ಅಮೂಲ್ಯ ಸಮಯ, ಶ್ರಮ ಮತ್ತು ಸೇವೆಯನ್ನು ಸಮರ್ಪಿಸಿದ ಎಲ್ಲಾ ಹಿರಿಯರನ್ನು ಈ ಸಂದರ್ಭದಲ್ಲಿ ಅತ್ಯಂತ ಗೌರವದಿಂದ ಸ್ಮರಿಸುತ್ತೇವೆ. ಅವರ ದೂರದೃಷ್ಟಿ, ತ್ಯಾಗ, ಸೇವಾ ಮನೋಭಾವ ಮತ್ತು ಮಾರ್ಗದರ್ಶನವೇ ನಮ್ಮ ಸಂಘದ ಭದ್ರ ಬುನಾದಿಯಾಗಿದೆ. ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಾ, ಅವರ ಅನುಭವ ಮತ್ತು ಆಶೀರ್ವಾದವನ್ನು ಪಡೆದುಕೊಂಡು ಸಂಘವನ್ನು ಇನ್ನಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯುವುದು ನಮ್ಮ ಸಂಕಲ್ಪವಾಗಿದೆ.

ಸಂಘದ ಆಡಳಿತದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ, ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ನಮ್ಮ ಪ್ರಮುಖ ಆದ್ಯತೆಗಳಾಗಿರುತ್ತವೆ. ಯಾವುದೇ ಕಾರ್ಯಚಟುವಟಿಕೆಯಲ್ಲಿ ಸಂಘದ ಹಿತಾಸಕ್ತಿ ಮತ್ತು ಸದಸ್ಯರ ಕಲ್ಯಾಣವೇ ನಮ್ಮ ಪ್ರಮುಖ ಮಾನದಂಡವಾಗಿರುತ್ತದೆ.

ನಮ್ಮ ಸಂಘವು ಕೇವಲ ಒಂದು ಸಂಸ್ಥೆಯಲ್ಲ; ಅದು ನಮ್ಮ ಸಮುದಾಯದ ಒಗ್ಗಟ್ಟು, ಸಂಸ್ಕೃತಿ, ಪರಂಪರೆ ಮತ್ತು ಪರಸ್ಪರ ಬಾಂಧವ್ಯದ ಪ್ರತೀಕವಾಗಿದೆ. ಈ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಅದೇ ರೀತಿ, ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ, ಯುವಕರಿಗೆ ಸೂಕ್ತ ವೇದಿಕೆ, ಪ್ರತಿಭಾವಂತರಿಗೆ ಪ್ರೋತ್ಸಾಹ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ನಮ್ಮ ಸದಸ್ಯರನ್ನು ಗುರುತಿಸಿ ಗೌರವಿಸುವಂತಹ ಕಾರ್ಯಗಳಿಗೆ ಹೆಚ್ಚಿನ ಮಹತ್ವ ನೀಡುವ ಉದ್ದೇಶ ನಮ್ಮದಾಗಿದೆ.

ಶಿಕ್ಷಣ, ಉದ್ಯೋಗ, ಉದ್ಯಮ, ಕಲೆ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸಮಾಜಸೇವೆಯ ಕ್ಷೇತ್ರಗಳಲ್ಲಿ ನಮ್ಮ ಸಮುದಾಯದ ಸದಸ್ಯರು ಮತ್ತಷ್ಟು ಮುನ್ನಡೆಯಲು ಅಗತ್ಯವಾದ ಸಹಕಾರ ಮತ್ತು ವೇದಿಕೆಯನ್ನು ಒದಗಿಸುವ ನಿಟ್ಟಿನಲ್ಲಿ ಸಂಘದ ಮೂಲಕ ಸಾಧ್ಯವಾದಷ್ಟು ಕಾರ್ಯಕ್ರಮಗಳನ್ನು ರೂಪಿಸಲು ಪ್ರಯತ್ನಿಸುತ್ತೇವೆ. ಮುಂದಿನ ದಿನಗಳಲ್ಲಿ ನಿಮ್ಮ ಸಹಕಾರ ಮತ್ತು ಮಾರ್ಗದರ್ಶನ ನಮಗೆ ಅಗತ್ಯ. ನಿಮ್ಮೆಲ್ಲರ ಸಲಹೆ, ಸಹಕಾರ ಮತ್ತು ಆಶೀರ್ವಾದದೊಂದಿಗೆ ಬೆಂಗಳೂರು ಬಂಟರ ಸಂಘವನ್ನು ಇನ್ನಷ್ಟು ಬಲಿಷ್ಠ, ಸಕ್ರಿಯ, ಪಾರದರ್ಶಕ ಮತ್ತು ಮಾದರಿ ಸಂಸ್ಥೆಯಾಗಿ ಬೆಳೆಸುವ ನಮ್ಮ ಪ್ರಯತ್ನ ನಿರಂತರವಾಗಿರುತ್ತದೆ.

ಪ್ರತಿಯೊಬ್ಬ ಸದಸ್ಯರು ಸಂಘದೊಂದಿಗೆ ನಿರಂತರ ಸಂಪರ್ಕವನ್ನಿಟ್ಟುಕೊಂಡು ಸಮಾಜದ ಹಿತಕ್ಕಾಗಿ ಕೈಗೊಳ್ಳುವ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಿಕೊಳ್ಳುತ್ತೇನೆ.

ನಿಮ್ಮೆಲ್ಲರ ವಿಶ್ವಾಸ, ಬೆಂಬಲ ಮತ್ತು ಸಹಕಾರವೇ ನಮ್ಮ ಶಕ್ತಿ.

ಇಂತಿ ತಮ್ಮ ಪ್ರೀತಿಯ
**ಅಮರನಾಥ ಶೆಟ್ಟಿ**
ಗೌರವ ಕಾರ್ಯದರ್ಶಿ 2026–29

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 2026–29 ನೇ ಸಾಲಿಗೆ ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

## ಪದಾಧಿಕಾರಿಗಳು



ಡಾ. ದೀಪಕ್ ಶೆಟ್ಟಿ
ಅಧ್ಯಕ್ಷರು



ಶ್ರೀ ಮಧುಕರ ಎಂ. ಶೆಟ್ಟಿ
ಪ್ರಥಮ ಉಪಾಧ್ಯಕ್ಷರು



ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ
ದ್ವಿತೀಯ ಉಪಾಧ್ಯಕ್ಷರು



ಶ್ರೀ ಅಮರನಾಥ ಶೆಟ್ಟಿ
ಗೌರವ ಕಾರ್ಯದರ್ಶಿ



ಶ್ರೀಮತಿ ಸುರೇಖಾ ಶೆಟ್ಟಿ
ಜಂಟಿ ಕಾರ್ಯದರ್ಶಿ



ಶ್ರೀ ರಮಿತ್ ಬಿ. ಶೆಟ್ಟಿ
ಖಜಾಂಚಿ

## ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀಮತಿ ಅನಿತಾ ಪಿ. ಭಂಡಾರಿ



ಶ್ರೀ ಅರುಣ್ ಕುಮಾರ್ ಶೆಟ್ಟಿ ಹೆಚ್.



ಸಿಎ. ಚಂದ್ರಶೇಖರ ಶೆಟ್ಟಿ



ಶ್ರೀಮತಿ ಹೀರಾ ಅನೂಪ್ ಹೆಗ್ಡೆ



ಶ್ರೀ ಕೀರ್ತನ್ ಶೆಟ್ಟಿ



ಸಿಎ. ಕಿಶೋರ್ ಶೆಟ್ಟಿ

## ಕಾರ್ಯಕಾರಿ ಸಮಿತಿ ಸದಸ್ಯರು


ಶ್ರೀಮತಿ ಮಾಲತಿ ಜೆ. ಶೆಟ್ಟಿ


ಶ್ರೀ ನಿತ್ಯರಂಜನ್ ಶೆಟ್ಟಿ


ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ


ಶ್ರೀ ಪ್ರಶಾಂತ್ ಶೆಟ್ಟಿ ಎಸ್.


ಶ್ರೀ ಪ್ರತಾಪ್ ಶೆಟ್ಟಿ


ಶ್ರೀ ರಾಮ್‌ದಾಸ್ ಶೆಟ್ಟಿ ಕೆ.ಎಸ್.


ಶ್ರೀಮತಿ ಶಕುಂತಲ ಶೆಟ್ಟಿ


ಶ್ರೀ ಸುರೇಂದ್ರ ಶೆಟ್ಟಿ ಹೆಚ್.


ಶ್ರೀ ಉಮೇಶ್ ಪೂಂಜ ಡಿ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE



ದಿನಾಂಕ 27.09.2026ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ತುಳುನಾಡ ಜವನೆರ್ ಸಂಸ್ಥೆಯ ಆಶ್ರಯದಲ್ಲಿ ನಡೆದ 'ಅಷ್ಟಮಿದ ಐಸಿರ' ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ತುಳು ಭಾಷೆಗೆ ಹೆಚ್ಚುವರಿ ಆಡಳಿತ ಭಾಷೆಯ ಮಾನ್ಯತೆಯನ್ನು ನೀಡಿರುವುದಕ್ಕಾಗಿ ಬೆಂಗಳೂರು ಬಂಟರ ಸಂಘದ ವತಿಯಿಂದ ಹಾಗೂ ಸಮಸ್ತ ಕರಾವಳಿಯ ಜನತೆಯ ಪರವಾಗಿ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಡಿ. ಕೆ. ಶಿವಕುಮಾರ್** ಇವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.

# BSRNS Vidyaniketan - II Independence Day Celebration

Bunts' Sangha RNS Vidyaniketan - II Yelachaguppe Taverekere celebrated India's 80th Independence day with great enthusiasm and patriotism. The event was marked by a series of activities including flag hoisting, cultural performance and patriotic songs.




The day began with the hoisting of the national flag by the chief guest Subhedar Major Harpal Singh, management committee and our school principal, followed by the singing of the national anthem. Students from various classes participated in cultural events, showcasing their talents through dance, music and drama.







The highlight of the event was speech by the principal and chief guest, who all emphasized the importance of independence and sacrifices made by our freedom fighters. The students also took an oath to upload the values of unity, integrity and democracy.




The event concluded with the distribution of sweets and a sense of pride and patriotism among the students and staff....

# Congratulations



**Dr. Shalmalee S. Rai**

Dr. Shalmalee S. Rai represented Karnataka and won 2 Bronze medals at the National Masters Swimming Championships in Haryana in September. Prior to this she had won 5 Gold Medals and 1 Silver in the Karnataka State Meet.

She is now selected to represent India at the Asian Masters Swimming Meet next month. Bunts Sangha Bangalore Congratulates and wishes her all the best.

# Bunts' Sangha R.N.S Composite PU College Independence Day 2026 - 27 : Report

The 80th Independence Day was celebrated at the School Quadrangle on 15th August 2026, Saturday. Lt. Col. Sunil Pandith of the Para Regiment was the Chief Guest for the day. The Chief Guest, President of Bunts' Sangha CA Ashok Shetty M., Treasurer of Bunts' Sangha Sri Ashok Kumar Shetty, Smt. Jayashree Rai, Joint Secretary of Bunts' Sangha, Governing Council members, Executive Council members, coordinators of various wings, along with the Principal, Smt. Usha Santosh, were officially welcomed by the school band.




All the dignitaries paid respect to the freedom fighters and hoisted our National Flag. The National Anthem, followed by the Dhwaj Geet, was sung by the school choir. The Chief Guest and other dignitaries received the Guard of Honour.

All the dignitaries, teachers and students were formally welcomed by Ms. Prachi of 10th CBSE. Ms. Sanidhya P Shetty, a cute Montessori child, spoke about the significance of the celebration in Kannada, which was the highlight of the event. Ms. Snigdha Acharya of the Second PUC College Wing spoke about the importance of Yuva Shakti in shaping the future. She also expressed her desire to be a part of the Viksit Bharat initiative by contributing in her own way.



Toppers of the ICSE and CBSE Board examinations were felicitated by the dignitaries. The teachers of both ICSE and CBSE streams who achieved centum results were also felicitated.

In the keynote address, the Treasurer spoke about the unforgettable role of teachers and parents in a student's life, along with stressing the importance of celebrating our Independence Day.




The Chief Guest was introduced by Madam Principal. In his address to the students, the Chief Guest elaborated on taking examples from history and explained how our future should be. He further explained that we can define the future of the world through our hard work and dedication. The Chief Guest was felicitated by the Management. The President spoke about the contribution of each individual in ensuring a bright future for all the generations to come. He also told the students that excelling in their chosen fields contributes to the development of the country and that each person has a significant role to play.

Master Ved M. of 10th ICSE proposed the Vote of Thanks.A vibrant cultural programme by various wings of the school, including songs and dance added glory to the celebration. The programme came to an end with the distribution of sweets to all the students.



ADVT.

## ಬಂಟರ ಸಂಘ ಬೆಂಗಳೂರು – ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಯಕ್ಷಗಾನ ಕಾರ್ಯಕ್ರಮ






ಸಂಘದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 14.09.2026ರಂದು ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಗಣೇಶ ಚತುರ್ಥಿ ಕಾರ್ಯಕ್ರಮದ ಪ್ರಯುಕ್ತ ಸಂಘದ ಸದಸ್ಯರು ಮತ್ತು ಅತಿಥಿ ಕಲಾವಿದರಿಂದ ಗದಾಯುದ್ಧ ಯಕ್ಷಗಾನವನ್ನು ಆಯೋಜಿಸಲಾಗಿತ್ತು. ಯಕ್ಷಗಾನ ಪ್ರದರ್ಶನವು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.




ಯಕ್ಷಗಾನ ಕಾರ್ಯಕ್ರಮಕ್ಕೆ ಸಹಕರಿಸಿದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರಿಗೆ, ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಸದಸ್ಯರಿಗೆ, ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದ ಹಾಗೂ ಪ್ರತ್ಯೇಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು, ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

**ಸಂತೋಷ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

## ಬಂಟರ ಸಂಘ ಬೆಂಗಳೂರು ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಎಲ್.ಎನ್. ಹೆಗ್ಡೆಯವರಿಗೆ ನುಡಿನಮನ

ಬಂಟರ ಸಂಘದ ಮಾಜಿ ಅಧ್ಯಕ್ಷರು, ದಕ್ಷ ಆಡಳಿತಗಾರ, ಉತ್ತಮ ನಾಯಕತ್ವ ಹಾಗೂ ಸೇವಾ ಮನೋಭಾವನೆ–ಯುಳ್ಳವರಾಗಿದ್ದ ಶ್ರೀ ಬಿ.ಎಲ್.ಎನ್ ಹೆಗ್ಡೆಯವರು ದಿನಾಂಕ 25.08.2026ರಂದು ದೈವಾಧೀನರಾದರು. ಶ್ರೀಯುತರ ಗೌರವಾರ್ಥವಾಗಿ ನುಡಿನಮನ ಕಾರ್ಯಕ್ರಮವನ್ನು ದಿನಾಂಕ 12.09.2026, ಶನಿವಾರ ಸಂಜೆ 4.00ಕ್ಕೆ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸಂಘದ ವತಿಯಿಂದ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಶ್ರೀ ಬಿ.ಎಲ್.ಎನ್. ಹೆಗ್ಡೆಯವರ ಕುಟುಂಬ ವರ್ಗದವರು, ಸಂಘದ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಗೌರವ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.



ಮಾಜಿ ಅಧ್ಯಕ್ಷರುಗಳಾದ ಡಾ| ನರೇಶ್ ಶೆಟ್ಟಿ, ಶ್ರೀ ಡಿ. ಚಂದ್ರಹಾಸ್ ರೈ, ಶ್ರೀ ಎಂ. ಮುರಲೀಧರ ಹೆಗ್ಡೆ ಹಾಗೂ ಮಾಜಿ ಗೌರವ ಕಾರ್ಯದರ್ಶಿಗಳಾದ ಶ್ರೀ ಶ್ರೀಧರ್ ಹೆಗ್ಡೆಯವರು ನುಡಿನಮನ ಸಲ್ಲಿಸಿ ಸಂಘದ ಬೆಳವಣಿಗೆಗೆ ಇವರ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಮುದ್ದಣ್ಣ ಶೆಟ್ಟಿ, ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಶ್ರೀಮತಿ ಗೀತಾ ಎಲ್.ಎನ್. ಶೆಟ್ಟಿ, ಶ್ರೀ ಶಿವಾನಂದ ಶೆಟ್ಟಿ, ಶ್ರೀ ಉಮೇಶ್ ಶೆಟ್ಟಿ ಎಂ. ಬಿಯವರು ಇವರೊಂದಿಗಿನ ಒಡನಾಟ ಹಾಗೂ ನೆನಪುಗಳನ್ನು ಹಂಚಿಕೊಂಡರು.

ಶ್ರೀ ಬಿ.ಎಲ್.ಎನ್ ಹೆಗ್ಡೆಯವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಎಲ್ಲರೂ ಶ್ಲಾಘಿಸಿದರು. ಇವರ ಅವಧಿಯಲ್ಲಿ ಪ್ರಪ್ರಥವಾಗಿ ಸಂಘದ ಸದಸ್ಯರ ನೂತನ ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು.

ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ದಿ| ಹೆಗ್ಡೆಯವರ ಬಗ್ಗೆ ಮಾತನಾಡುತ್ತಾ ಶ್ರೀಯುತರ ಸೇವೆಯನ್ನು ಸ್ಮರಿಸಿದರು.

ಶ್ರೀ ಬಿ.ಎಲ್.ಎನ್ ಹೆಗ್ಡೆಯವರ ಆತ್ಮ ಸದ್ಗತಿಯ ಬಗ್ಗೆ ಒಂದು ನಿಮಿಷದ ಮೌನ ಪ್ರಾರ್ಥನೆ ಹಾಗೂ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಬಂಟರ ಸಂಘ ಬೆಂಗಳೂರು
# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ
# ಗಣೇಶ ಚತುರ್ಥಿ ಆಚರಣೆ

ದಿನಾಂಕ 14.09.2026, ಸೋಮವಾರದಂದು ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.



ಸಂಕೀರ್ಣದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ಆಯೋಜಿಸಿದ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನೆರವೇರಿತು. ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ದಂಪತಿ, ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯಿತು.



ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಬೆಳಿಗ್ಗೆ 9.30 ರಿಂದ ಸಂಘದ ಶ್ರೀ ವರಸಿದ್ಧಿ ವಿನಾಯಕ ಭಜನಾ ತಂಡದಿಂದ ಹಾಗೂ ಭಜನಾ ತರಬೇತುದಾರರಿಂದ ಭಜನಾ ಕಾರ್ಯಕ್ರಮವು ನಡೆಯಿತು. ಬೆಳಿಗ್ಗೆ 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ, ಗಣಹೋಮ ಹಾಗೂ ಕಲ್ಪೋಕ್ತ ಪೂಜೆಯನ್ನು ನೆರವೇರಿಸಲಾಯಿತು. ಮಹಾಪೂಜೆಯ ನಂತರ ಅನ್ನರಾಶಿ ಪೂಜೆಯನ್ನು ನೆರವೇರಿಸಲಾಯಿತು. ಮಧ್ಯಾಹ್ನ ಸುಮಾರು 2500ಕ್ಕೂ ಅಧಿಕ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಲಾಯಿತು. ಗಣೇಶ ಚತುರ್ಥಿ ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಮಂದಿರದಲ್ಲಿ ಗಣೇಶ ಪ್ರಸಾದವನ್ನು ನೀಡಿ ಅಭಿನಂದಿಸಲಾಯಿತು. ನಂತರ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ಗದಾಯುದ್ಧ ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಯಕ್ಷಗಾನ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದ ಸಂಘದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಹಾಗೂ ಯಕ್ಷಗಾನ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.





ಸಂಜೆ 5.00ಕ್ಕೆ ಸಂಘದ ಕುಣಿತ ಭಜನಾ ತರಗತಿಯ ಮಕ್ಕಳಿಂದ ಹಾಗೂ ಭಜನಾ ತರಬೇತುದಾರರಿಂದ ಆಯೋಜಿಸಲಾದ ಕುಣಿತ ಭಜನೆಯು ಜನಮನ ಸೆಳೆಯಿತು.

ಸಂಜೆ 7.00ಕ್ಕೆ ಗಣೇಶನ ಮೆರವಣಿಗೆ ಚೆಂಡೆ, ವಾದ್ಯ, ಕುಣಿತದೊಂದಿಗೆ ಬಂಟರ ಸಂಘದ ಆವರಣದಿಂದ

ಹೊರಟು ವಿಜಯನಗರ ಮತ್ತು ಚಂದ್ರಾ ಲೇಔಟ್ ಸುತ್ತಮುತ್ತ ತಿರುಗಿ ಚಂದ್ರಾ ಲೇಔಟ್‌ನಲ್ಲಿ ವಿಸರ್ಜಿಸಲಾಯಿತು. ಸಂಘದ ಬಹುತೇಕ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಗೆ ಮೆರುಗನ್ನು ನೀಡಿದರು.



**ದೇಣಿಗೆ ನೀಡಿ ಸಹಕರಿಸಿದವರು:**

| | | |
|---|---|---|
| ಶ್ರೀಮತಿ ರಾಜಮ್ಮ ಹೆಗ್ಡೆ | ವಿಜಯ್ ಜೆ. ಶೆಟ್ಟಿ ಹಾಲಾಡಿ ಮತ್ತು | ಶ್ರೀ ರವೀಂದ್ರನಾಥ ಮಾರ್ಲ |
| ಡಾ. ಚಿತ್ರಕರ ಹೆಗ್ಡೆ | ಶ್ರೀ ಜಗನ್ನಾಥ್ ಶೆಟ್ಟಿ ಹೆಚ್ | ಡಾ. ದೀಪಕ್ ಶೆಟ್ಟಿ |
| ಶ್ರೀಮತಿ ಕಾಂತಿ ಶೆಟ್ಟಿ | ಶ್ರೀ ಎ.ಎನ್. ಶೆಟ್ಟಿ | ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ |
| ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ | ಶ್ರೀಮತಿ ರತ್ನಾ ಬಡಿಗಾರ್ | ಸಿಎ. ಚಂದ್ರಶೇಖರ್ ಶೆಟ್ಟಿ |
| ಶ್ರೀ ರಮಿತ್ ಬಿ. ಶೆಟ್ಟಿ | ಡಾ. ಉಮನಾಥ್ ಶೆಟ್ಟಿ ವೈ | ಶ್ರೀಮತಿ ಸುಜಾತ ಯು. ಹೆಗ್ಡೆ |
| ಶ್ರೀ ಜಯಶೀಲ್ ಶೆಟ್ಟಿ ಬಿ. | ಸಿಎ. ಕಿಶೋರ್ ಶೆಟ್ಟಿ | ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ |
| ಶ್ರೀ ರಾಜೇಶ್ ಶೆಟ್ಟಿ ಕುತ್ಯಾರ್ | ಶ್ರೀ ಸುಕೇಶ್ ಶೆಟ್ಟಿ | ಶ್ರೀ ಸುಧಾಕರ್ ರೈ ಕೆ.ಟಿ. |
| ಶ್ರೀ ಉಮೇಶ್ ಪೂಂಜ ಡಿ. | ಶ್ರೀ ಡಿ.ಬಿ. ಪ್ರತಾಪ್ ಶೆಟ್ಟಿ | ಶ್ರೀ ಪ್ರಮೋದ್‌ಚಂದ್ರ ಭಂಡಾರಿ |
| ಶ್ರೀಮತಿ ಮಾಲತಿ ಅರುಣ್ ಶೆಟ್ಟಿ | ಶ್ರೀಮತಿ ಗೀತಾಂಜಲಿ ಡಿ. ಅಜಿಲ | ಶ್ರೀ ಎ. ಗಿರೀಶ್ ರೈ |
| ಶ್ರೀ ನಿತ್ಯರಂಜನ್ ಶೆಟ್ಟಿ | ಶ್ರೀ ಶಿವಾನಂದ ಶೆಟ್ಟಿ | ಶ್ರೀ ಅರುಣ್ ಕುಮಾರ್ ಶೆಟ್ಟಿ ಹೆಚ್. |
| ಶ್ರೀ ಸೂರ್ಯಚಂದ್ರ ಶೆಟ್ಟಿ | ಶ್ರೀ ವಿನಯ್ ಕುಮಾರ್ ಶೆಟ್ಟಿ | ಶ್ರೀ ಪ್ರಸನ್ನ ಕುಮಾರ್ ಶೆಟ್ಟಿ |
| ಶ್ರೀ ಶಾಂತರಾಮ್ ಶೆಟ್ಟಿ | ಶ್ರೀ ಅಮರನಾಥ ಶೆಟ್ಟಿ | ಶ್ರೀ ಮುರಲೀಧರ ಹೆಗ್ಡೆ |
| ಶ್ರೀ ಸಂತೋಷ್ ಶೆಟ್ಟಿ ಜೆ. | ಸಿಎ. ವಿಜಯ್ ಶೆಟ್ಟಿ | ಶ್ರೀ ಕೀರ್ತನ್ ಶೆಟ್ಟಿ |
| ಶ್ರೀ ಪ್ರಥ್ವಿರಾಜ್ ಶೆಟ್ಟಿ | ಶ್ರೀ ಅಮರೇಷ್ ಶೆಟ್ಟಿ | ಶ್ರೀ ಚಂದ್ರಶೇಖರ್ ಶೆಟ್ಟಿ |
| ಶ್ರೀ ಸಂದೀಪ್ ಶೆಟ್ಟಿ | ಶ್ರೀಮತಿ ಶ್ಯಾಮಲ ಶೆಟ್ಟಿ | |

**ನೇರ ಪ್ರಾಯೋಜಕತ್ವ ನೀಡಿ ಸಹಕರಿಸಿದವರು:–**

| | | |
|---|---|---|
| ಶ್ರೀ ಜಯಪ್ರಸಾದ್ ಶೆಟ್ಟಿ ಇರ್ವಾಡಿ | ಶ್ರೀ ಸುಧಾಕರ್ ಶೆಟ್ಟಿ ಕೂಲ್ ಕಾರ್ನರ್ | ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ. |
| ಶ್ರೀ ಅಜಿತ್ ವಿ. ಶೆಟ್ಟಿ | ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ. | ಶ್ರೀ ರವೀಂದ್ರ ಶೆಟ್ಟಿ |
| ಶ್ರೀಮತಿ ಮಮತಾ ಡಿ. ಶೆಟ್ಟಿ | ಶ್ರೀಮತಿ ಶಾರದ ಶೆಟ್ಟಿ | ಶ್ರೀಮತಿ ಅಕ್ಷತಾ ಶೆಟ್ಟಿ |
| ಶ್ರೀಮತಿ ಮಂಜುಳಾ ಶೆಟ್ಟಿ | ಶ್ರೀ ಸುರೇಂದ್ರ ಶೆಟ್ಟಿ | ಶ್ರೀ ಪ್ರಶಾಂತ್ ಶೆಟ್ಟಿ |
| ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ | ಶ್ರೀ ಸೃಜನ್ ಶೇಖ | |

ಪೂಜಾ ಕಾರ್ಯಕ್ರಮದಲ್ಲಿ ಸಹಕರಿಸಿದ, ಭಾಗವಹಿಸಿದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ಪ್ರಸ್ತುತ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ನಮ್ಮ ಜೊತೆ ಹಗಲು–ರಾತ್ರಿ ನಿಸ್ವಾರ್ಥ ಸೇವೆ ಸಲ್ಲಿಸಿದ ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರುಗಳಿಗೆ ಮನದಾಳದ ವಂದನೆಗಳು. ಸದಾ ಪ್ರೋತ್ಸಾಹ ನೀಡಿದ ನಮ್ಮ ಭಜನೆ ತಂಡ ಮಕ್ಕಳು ಮತ್ತು ಪೋಷಕರಿಗೆ, ಪೂಜಾ ಸೇವೆಗಳನ್ನು ಸಲ್ಲಿಸಿದ ಭಕ್ತಾಧಿಗಳಿಗೆ ಧನ್ಯವಾದಗಳು.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪ್ರಾರ್ಥನಾ ಸಮಿತಿಯ ಪರವಾಗಿ ಧನ್ಯವಾದಗಳು. ಶ್ರೀ ವರಸಿದ್ಧಿ ವಿನಾಯಕನು ಎಲ್ಲರಿಗೂ ಆಯುರಾರೋಗ್ಯ ಭಾಗ್ಯವನ್ನಿತ್ತು ಕರುಣಿಸಲಿ.

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# BUNTS' SANGHA BANGALORE
# 2026 - 29 ELECTION RESULT

| S.N. | Candidate Name | Total Voters | Rank | Status |
|---|---|---|---|---|
| | **PRESIDENT (One)** | | | |
| 1 | Deepak Shetty | 4168 | 1 | **Elected** |
| 2 | Kanthi Shetty | 1042 | 2 | |
| 3 | Nagaraj Shetty | 753 | 3 | |
| | Did Not Voted / Skipped Voting | 187 | | |
| | **Total Voted:** | **6150** | | |
| | **I VICE PRESIDENT (One)** | | | |
| 1 | Madhukar M. Shetty | 4049 | 1 | **Elected** |
| 2 | Sudhakar Shetty S. | 1738 | 2 | |
| | Did Not Voted / Skipped Voting | 363 | | |
| | **Total Voted:** | **6150** | | |
| | **II VICE PRESIDENT - LADY (One)** | | | |
| 1 | Sowmyapriya Hegde | 3503 | 1 | **Elected** |
| 2 | Jayashri C. Rai | 2268 | 2 | |
| | Did Not Voted / Skipped Voting | 379 | | |
| | **Total Voted:** | **6150** | | |
| | **HON. SECRETARY (One)** | | | |
| 1 | Amarnath Shetty | 4201 | 1 | **Elected** |
| 2 | Sandeep Shetty B. | 1674 | 2 | |
| | Did Not Voted / Skipped Voting | 275 | | |
| | **Total Voted:** | **6150** | | |
| | **JOINT SECRETARY - LADY(One)** | | | |
| 1 | Surekha Shetty | 3672 | 1 | **Elected** |
| 2 | Geetha Shetty | 2086 | 2 | |
| | Did Not Voted / Skipped Voting | 392 | | |
| | **Total Voted:** | **6150** | | |

| S.N. | Candidate Name | Total Voters | Rank | Status |
|---|---|---|---|---|
| | **TREASURER (One)** | | | |
| 1 | Ramith B. Shetty | 3693 | 1 | **Elected** |
| 2 | Umesh Kumar Shetty | 2212 | 2 | |
| | Did Not Voted / Skipped Voting | 245 | | |
| | **Total Voted:** | **6150** | | |
| | **EXECUTIVE COMMITTEE MEMBERS (Fifteen)** | | | |
| 1 | Anitha P. Bhandary | 4478 | 1 | **Elected** |
| 2 | Chandrashekara Shetty Ca | 4313 | 2 | **Elected** |
| 3 | Malathi J. Shetty | 4281 | 3 | **Elected** |
| 4 | Kishor Shetty Ca | 4267 | 4 | **Elected** |
| 5 | Prashanth Shetty S. | 4266 | 5 | **Elected** |
| 6 | Keerthan Shetty | 4264 | 6 | **Elected** |
| 7 | Surendra Shetty H. | 4247 | 7 | **Elected** |
| 8 | Prasad Kumar Shetty | 4187 | 8 | **Elected** |
| 9 | Arun Kumar Shetty H. | 4152 | 9 | **Elected** |
| 10 | Nithyaranjan Shetty | 4141 | 10 | **Elected** |
| 11 | Shakunthala Shetty | 4136 | 11 | **Elected** |
| 12 | Heera Anup Hegde | 4058 | 12 | **Elected** |
| 13 | Prathap Shetty | 3982 | 13 | **Elected** |
| 14 | Ramdas Shetty K. S. | 3795 | 14 | **Elected** |
| 15 | Umesh Poonja D. | 3717 | 15 | **Elected** |
| 16 | Kiran Kumar Shetty M. | 2815 | 16 | |
| | **Total Voted:** | **6150** | | |

Sd/-
**B. S. Harish Kumar**
Returning Officer
Bunts' Sangha Bangalore

**ದಿನಾಂಕ 20.09.2026 ರಂದು ನಡೆದ ಚುನಾವಣೆಯ ಮತಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಶ್ರೀಮತಿ ಕಾಂತಿ ಶೆಟ್ಟಿಯವರು ಪ್ರಕಟಿಸಿರುವ ಪೋಸ್ಟ್ ಬಗ್ಗೆ ಶ್ರೀಮತಿ ಕಾಂತಿ ಶೆಟ್ಟಿಯವರು ದಿನಾಂಕ 23.09.2026 ರಂದು ಸಂಘಕ್ಕೆ ಸಲ್ಲಿಸಿರುವ ಸ್ಪಷ್ಟೀಕರಣ.**

ಸ್ಕ್ರೀನಿಂಗ್ ಕಮಿಟಿ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ಗೌರವದಿಂದ ಸ್ವೀಕರಿಸುತ್ತೇನೆ.

ಸಂಘದ ಉಪಾಧ್ಯಕ್ಷೆಯಾಗಿ, ಸಂಘದ ಘನತೆ ಮತ್ತು ಗೌರವವನ್ನು ಕಾಪಾಡುವುದು ನನ್ನ ಕರ್ತವ್ಯ. ನನ್ನ ಯಾವುದೇ ಮಾತು ಅಥವಾ ನಡೆ ಸಂಘದ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಇರಲಿಲ್ಲ.

ಚುನಾವಣೆಯ ಕೌಂಟಿಂಗ್ ದಿನದಂದು ನನ್ನ ಫೇಸ್‌ಬುಕ್ ಖಾತೆ ಹಾಗೂ ಚುನಾವಣಾ ಗುಂಪಿನಲ್ಲಿ ಮಾತ್ರ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದೇನೆ. ಯಾವುದೇ ಯುಟ್ಯೂಬ್ ಅಥವಾ ಮಾಧ್ಯಮಕ್ಕೆ ಹೇಳಿಕೆ ನೀಡಿಲ್ಲ.

ಇದರಿಂದ ಯಾರಿಗಾದರೂ ಬೇಸರವಾಗಿದ್ದರೆ ಕ್ಷಮೆ ಇರಲಿ.

ನನ್ನ ಮಾತುಗಳನ್ನು ಆಲಿಸಿ, ಮಾರ್ಗದರ್ಶನ ನೀಡಿದ ಸ್ಕ್ರೀನಿಂಗ್ ಕಮಿಟಿಯ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಕಾಂತಿ ಶೆಟ್ಟಿ**
**ಉಪಾಧ್ಯಕ್ಷರು, ಬಂಟರ ಸಂಘ ಬೆಂಗಳೂರು, 2024–26**



ADVT.

## Auditorium Booking Status as on 30/09/2026

| Sl. No. | Booking date | Prog. date | Party name | Booking Category<br>Member/Non Member | Prog. Details |
|---|---|---|---|---|---|
| 1 | 01.09.2026 | 14.02.2027 | K N Yashwanth Kumar | Non Member | Beegara oota |
| 2 | 11.09.2026 | 25.10.2026 | Karavali Sports & Cultural Academy | Non Member | Coastal & Cultural |
| 3 | 16.09.2026 | 18.09.2026 | Rajashekar Ganiger | Non Member | Social service |
| 4 | 16.09.2026 | 29.11.2026 | Canara Bank Employees Union Regd | Non Member | Social service |
| 5 | 23.09.2026 | 15.12.2026 | HP Leeladhar | Non Member | Beegara oota |
| 6 | 24.09.2026 | 21.02.2027 | Ramesha C | Non Member | Beegara oota |
| 7 | 28.09.2026 | 06.10.2026 | Pradeep Kumar Shetty T N | Member | Uttarakriye |
| 8 | 28.09.2026 | 14.02.2027 | Nagaraj B N | Non Member | Beegara oota |
| 9 | 29.09.2026 | 23.11.2026 | G Concepts | Non Member | Social service |
| 10 | 29.09.2026 | 24.11.2026 | G Concepts | Non Member | Social service |
| 11 | 29.09.2026 | 26.11.2026 | G Concepts | Non Member | Social service |
| 12 | 29.09.2026 | 27.11.2026 | G Concepts | Non Member | Social service |
| 13 | 29.09.2026 | 28.11.2026 | G Concepts | Non Member | Social service |

**Note:** K. N. Yashwanth Kumar’s Beegara Oota booking on 14.02.2027 has been cancelled due to personal reasons.

# ಅಭಿನಂದನೆಗಳು



## ಡಾ| ದೀಪಕ್ ಶೆಟ್ಟಿ

ಬಂಟರ ಸಂಘ ಬೆಂಗಳೂರು ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾದ
ತಮಗೆ ಹಾಗೂ ತಮ್ಮ ತಂಡಕ್ಕೆ ಸಂಘದ ಪರವಾಗಿ
ಹಾರ್ದಿಕ ಅಭಿನಂದನೆಗಳು. ತಮ್ಮ ನೇತೃತ್ವದಲ್ಲಿ ಕೈಗೊಳ್ಳುವ ಎಲ್ಲಾ
ಸಮಾಜಮುಖಿ ಕಾರ್ಯಗಳು ಯಶಸ್ವಿಯಾಗಿ ಆಗಲಿ ಎಂದು ಹಾರೈಸುವ

**ಆಡಳಿತ ಮಂಡಳಿ**

**ಲಕ್ಷ್ಮೀ ಜಯಪಾಲ ಶೆಟ್ಟಿ**
ಉಪಾಧ್ಯಕ್ಷರು

**ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು

**ನಿರ್ದೇಶಕರುಗಳು**

ಕೆ. ಸೀತಾರಾಮ ರೈ ಸವಣೂರು | ಡಾ. ಕೆ. ಸುಭಾಶ್ಚಂದ್ರ ಶೆಟ್ಟಿ | ಪಿ. ಶಿವರಾಮ ಅಡ್ಯಂತಾಯ | ಸಿಎ ಎಚ್.ಆರ್. ಶೆಟ್ಟಿ | ವಿಠಲ ಪಿ. ಶೆಟ್ಟಿ | ಯಂ. ರಾಮಯ ಶೆಟ್ಟಿ | ಅರುಣ್ ಕುಮಾರ್ ಶೆಟ್ಟಿ
ಪಿ.ಬಿ. ದಿವಾಕರ ರೈ | ರವೀಂದ್ರನಾಥ ಜಿ. ಹೆಗ್ಡೆ | ಕುಂಬ್ರ ದಯಾಕರ ಆಳ್ವ | ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ | ಅರಿಯಡ್ಕ ಚಿಕ್ಕಪ್ಪ ನ್ಯಾಕ್ | ಡಾ. ಬಿ. ಸಂಜೀವ ರೈ

ಗಣೇಶ್ ಜಿ. ಕೆ. ಮಹಾಪ್ರಬಂಧಕರು

**ಸಹಕಾರ ಮಾಣಿಕ್ಯ**

## ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.

ESTD: 1994

ಕೇಂದ್ರ ಕಛೇರಿ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ವೃತ್ತ, ಮಂಗಳೂರು-575 003, ದೂರವಾಣಿ: 0824 - 2492275
E-mail: ho@ramakrishnacredit.com | Website: www.ramakrishnacredit.com

ADVT.




## From 14th November to 23rd November 2026

- **Sightseeing:**
- Visit Ba Dinh Square - the Biggest Square in Hanoi
- Visit the Hoani Kiem Lake & enjoy the water Puppet Show
- Enjoy 1 Nt in 5 Star Halong Bay Cruise- Enjoy all Cruise activities
- Visit Bay Mau Coconut Forest by Basket Boat
- Enjoy the Cable Car to the Summit of mountains
- Visit Ba Na hills with many different attractions - Funicular Ride, Le Jardin D'Amour Lin Ung Pagoda, Thick Ca Buddhist Statue etc.
- Enjoy city tour of Hochi minh city
- Visit Ho Chi Minh Mausoleum, Fish pond & one pillar pagoda
- Visit to War Remnants Museum, Reunification palace, Ben Thanh market etc
- Enjoy visit to Cu Chi Tunnels, My Tho - the Homeland of coconut factories, Vin Trang Pagoda









**COST INCLUSIONS :** To & Fro Economy class air tickets from Mumbai to Hanoi, Hanoi to Da Nong, Da Nong to Saigon & Saigon to Mumbai, 1 nt Accommodation in Hanoi with early check in for previous night, 1 nt in 5 star Halong Bay Cruise, 3 Nts in Da Nang, 3 Nts in Hochimin city, all lunches and dinners in Indian / local restaurants, all sight seeing by 40 seater A/C coach. *Cost does not include : All expenses of personal nature*

Please note that the rates are subject to change based on the prevailing USD exchange rate (ROE) at the time of your final payment. The current rates have been calculated using a USD exchange rate of Rs. 97.

**Cost : Rs. 142000/-** plus 2% TCS (Refundable)- Ex Mumbai

For any further details please contact:

IATA Approved

Canara Tours & Travels Pvt. Ltd
....... good people to travel with

**Mr. S. B. Shetty - 9820510043** E-mail : sbshetty@canaratravels.com
**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
Website : www.canaratravels.com
**Mr. Mohan - Mob No. 9980248449**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
**Mr. Prabhat Shetty - 9481950340** (Manipal)

ADVT.

# ಶ್ರದ್ಧಾಂಜಲಿ



ಶ್ರೀಧರ ಮಹಾಬಲ ಶೆಟ್ಟಿ
ಸದಸ್ಯತ್ವ ಸಂಖ್ಯೆ: CL007747

ನಿಂಜೂರು ದಿ. ಮಹಾಬಲ ಶೆಟ್ಟಿ ಮತ್ತು ಕೌಡೂರು ಕೊಡಂಚರಬೆಟ್ಟು ದಿ. ಸುಂದರಿ ಶೆಟ್ಟಿ ಇವರ ಪುತ್ರ ಶ್ರೀಧರ ಮಹಾಬಲ ಶೆಟ್ಟಿಯವರು ದಿನಾಂಕ 03.09.2026 ರಂದು ತಮ್ಮ 82ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಶ್ರೀಮತಿ ಸುಮತಿ ಎಸ್. ಶೆಟ್ಟಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

---



ಜಗದೀಶ್ ಶೆಟ್ಟಿ ಸೌಕೂರು
ಸದಸ್ಯತ್ವ ಸಂಖ್ಯೆ: CL008498

ಹಿಲಿಯಾಣ ದೊಡ್ಮನೆ ದಿ. ಸದಾಶಿವ ಶೆಟ್ಟಿ ಮತ್ತು ಸೌಕೂರು ಭಂಡಾರರ ಮನೆ ವನಜಾ ಶೆಟ್ಟಿ ಇವರ ಪುತ್ರ ಸೌಕೂರು ಭಂಡಾರರ ಮನೆ ಜಗದೀಶ್ ಶೆಟ್ಟಿಯವರು ದಿನಾಂಕ 08.09.2026 ರಂದು ತಮ್ಮ 79ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಪಾಂಡಿಚೇರಿ ಡಾ. ಮಂಗಳ ಸುಂದರಿ ಶೆಟ್ಟಿ, ಇಬ್ಬರು ಪುತ್ರಿಯರು, ಅಳಿಯ, ಇಬ್ಬರು ಮೊಮ್ಮಕ್ಕಳು, ಮೂವರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

---



ಕೊರ್ಗಿ ಗೋಪಾಲ್ ಶೆಟ್ಟಿ
ಸದಸ್ಯತ್ವ ಸಂಖ್ಯೆ: CL004581

ಕೊರ್ಗಿ ಅಜೂರ್‌ಮನೆ ದಿ. ಕೃಷ್ಣಪ್ಪ ಶೆಟ್ಟಿ ಮತ್ತು ಕಾಳಾವರ ನಡೂರುಮನೆ ದಿ. ಪದ್ದಮ್ಮ ಶೆಡ್ತಿ ಇವರ ಪುತ್ರ ಹೊಟೇಲ್ ಉದ್ಯಮಿಯಾದ ಕೊರ್ಗಿ ಗೋಪಾಲ್ ಶೆಟ್ಟಿ (ಉಡುಪಿ ಉಪಾಹಾರ ಗ್ರೂಪ್ ಆಫ್ ಹೋಟೆಲ್ಸ್ ಮತ್ತು ಹೋಟೆಲ್ ಒಬೆರಾನ್‌ನ ಮಾಲೀಕರು) ಯವರು ದಿನಾಂಕ 12.09.2026 ರಂದು ತಮ್ಮ 59ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ಬಂಟ್ಸ್ ಹೊಟೇಲ್ ಸಂಘದ ಮಾಜಿ ಅಧ್ಯಕ್ಷರಾಗಿದ್ದರು ಹಾಗೂ ಬಂಟರ ಸಂಘದ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರಾಗಿರುತ್ತಾರೆ. ಇವರು ತಮ್ಮ ಪತ್ನಿ ಕೆದೂರು ಬಡಾಡಿಮನೆ ಶ್ರೀಮತಿ ಜ್ಯೋತಿ ಜಿ. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸಹೋದರರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಸ್ಥಾಪನೆ: 1997

ದೂರವಾಣಿ : 080-23393444
ಮೊಬೈಲ್ : 87220 06082

# ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ.,

## Vijaya Souharda Credit Co Operative Society Ltd.,

ನಂ.5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್ ಟ್ಯಾಕ್ಸ್ ಬಡಾವಣೆ, ವಿಜಯನಗರ ಬೆಂಗಳೂರು - 560040.
E-mail : vijaya_souharda@yahoo.in, vijayasouharda@rediffmail.com

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 28 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಮ್ಮ ಸಹಕಾರಿಯು ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುದಾರರಿಗೆ ಆಕರ್ಷಣೀಯ ಡಿವಿಡೆಂಡ್ ನೀಡುತ್ತಿದ್ದೇವೆ. ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ 01.09.2024 ರಿಂದ ಆವರ್ತ ಠೇವಣಿ(ಖ.ಆ)ಯನ್ನು ಪ್ರಾರಂಭಿಸಿದ್ದು ಹಣ ತೊಡಗಿಸಿದವರಿಗೆ ವಾರ್ಷಿಕ 7% ಬಡ್ಡಿ ನೀಡಲಾಗುವುದು. ಸದಸ್ಯರು ಇವುಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

### ಸಾಲಗಳು

- ಜಾಮೀನು ಸಾಲ : ರೂ. 50,000.00 ದಿಂದ 2,00,000.00 ದವರೆಗೆ 24 ತಿಂಗಳಿನಿಂದ 36 ತಿಂಗಳವರೆಗೆ
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ ಅವಧಿ

**ಸಾಲದ ಬಡ್ಡಿ ದರ : 2 ಲಕ್ಷದವರೆಗೆ 13%, 2 ಲಕ್ಷ ಮೇಲ್ಪಟ್ಟು 12%**

2016–17 ರಿಂದ 2019–20 ರವರೆಗೆ ಸತತವಾಗಿ 15% ಹಾಗೂ 2020–2021 ರಲ್ಲಿ 12% ಮತ್ತು 2021 ರಿಂದ 2024 ರವರೆಗೆ 13% 2025 12%

ಸಹಕಾರಿಯ ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ನೆರವಾಗಿ.

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–30 | 2–00 ರಿಂದ 6–00 |
| ಶನಿವಾರ | 9–30 ರಿಂದ 1–30 | ರಜಾ |
| ಭಾನುವಾರ | ವಾರದ ರಜಾ ದಿನ | |

**2026 – 2031ರ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು**

ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್ ಚಂದ್ರ ಭಂಡಾರಿ
ಶ್ರೀ ರವೀಂದ್ರನಾಥ್ ಮಾರ್ಲ
ಶ್ರೀಮತಿ ಹೀರಾ ಅನೂಪ್ ಹೆಗ್ಡೆ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್ ಶಿವಾನಂದ್ ಶೆಟ್ಟಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ : ಶ್ರೀಮತಿ ಶೋಭ ಆರ್.
**ಸ್ಥಾಪಕ ಅಧ್ಯಕ್ಷರು : ದಿ. ಡಾ|| ಐ. ವಿ. ಶೆಟ್ಟಿ**

ಶ್ರೀ ಇರ್ವಾಡಿ ಜಯಪ್ರಸಾದ್ ಶೆಟ್ಟಿ
**ಅಧ್ಯಕ್ಷರು**

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
**ಉಪಾಧ್ಯಕ್ಷರು**

ADVT.

ತಮ್ಮ ಅಮೂಲ್ಯ ಮತದಿಂದ ಹುಮ್ಮಸ್ಸು ತುಂಬಿ, ಬೆನ್ನು ತಟ್ಟಿ
ಪ್ರೋತ್ಸಾಹಿಸಿದ ಬಂಟ ಕುಟುಂಬದ ಸರ್ವ ಮತದಾರರಿಗೂ

# ಹೃದಯಪೂರ್ವಕ ಧನ್ಯವಾದಗಳು

**ನಿಮ್ಮ ಅಮೂಲ್ಯ ಪ್ರೀತಿ • ವಿಶ್ವಾಸ • ಬೆಂಬಲಕ್ಕೆ**
**ನಾನು ಸದಾ ಚಿರಋಣಿ.**

ಎಂದೆಂದಿಗೂ ಒಟ್ಟಾಗಿ ಕೆಲಸ ಮಾಡೋಣ,
ಒಬ್ಬರಿಗೊಬ್ಬರು ಬೆಂಬಲವಾಗಿ ನಿಲ್ಲೋಣ, ಮತ್ತು
ನಮ್ಮೆಲ್ಲರ ಕನಸಿನ ಅತ್ಯುತ್ತಮ ಬಂಟರ ಸಂಘವನ್ನು
ಕಟ್ಟುವ ಕನಸು ನನಸಾಗಿಸೋಣ .

Thank you

to each and every Bunt Family member



**ಶ್ರೀಮತಿ ಕಾಂತಿ ಶೆಟ್ಟಿ**
ಉಪಾಧ್ಯಕ್ಷರು (2024-2026)
Bunts Sangha Bangalore

ADVT.

REGISTERED KA/BGW-1589/2A21-2A23 RNI No. : KARBIL/2005/16402, Date of Publication 07-09-2026.
Licenced post without prepayment License No.PMG BG /WPP-219/2A21-2023, Total No.of Pages 20+4=24
Licensed to post at Bengaluru PSO, Mysuru Road, Bengaluru - 560026, on 10th or 12th of every Month




Printed and Published by : Sri Vijay J Shetty Halady. on behalf of Bunts' Sangha Bengaluru.
# 324, Bunts' Sangha Complex, Chord Road, Vijayanagar, Bengaluru - 560 040. Editor : Ravindra Shetty.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 58.
Phone : 080 - 23359588 | 23351210